*ಅಪೊಸ್ತಲನಾದ ಪೌಲನು*

# ಫಿಲೆಮೋನನಿಗೆ ಬರೆದ ಪತ್ರಿಕೆ

**ಗ್ರಂಥಕರ್ತ:**

ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು.

**ದಿನಾಂಕ:**

ಕ್ರಿ.ಶ. 60.

**ಧ್ಯೇಯ:**

ಸುವಾರ್ತೆಯ ನಿಮಿತ್ತ ಹಿಂಸೆಗೊಳಗಾಗಿ ಸೆರೆಮನೆಯಲ್ಲಿದ್ದ ಸಮಯದಲ್ಲಿ ಪೌಲನು ಈ ಪತ್ರಿಕೆಯನ್ನು ಬರೆದಿದ್ದಾನೆ. ಫಿಲೆಮೋನನ ಬಳಿಯಲ್ಲಿದ್ದ ಓನೇಸಿಮನೆಂಬ ದಾಸನು, ತನ್ನ ಯಜಮಾನನನ್ನು ಬಿಟ್ಟು ಓಡಿ ಹೋಗಿದ್ದನು ಮತ್ತು ಪೌಲನಿದ್ದ ಸ್ಥಳಕ್ಕೆ ಬಂದಿದ್ದನು. ಅವನು ಪೌಲನ ಮೂಲಕ ಸುವಾರ್ತೆಯನ್ನು ಕೇಳಿಸಿಕೊಂಡನು ಮತ್ತು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟನು. ಈಗ ಪೌಲನು ಅವನನ್ನು ಫಿಲೆಮೋನನ ಬಳಿಗೆ ಕಳುಹಿಸುತ್ತಾ ಇದ್ದಾನೆ. ಓನೇಸಿಮನು ಎಂಬ ಹೆಸರಿನ ಅರ್ಥ “ಲಾಭದಾಯಕ”, “ಉಪಯುಕ್ತ”. ಅವನು ಭೂತಕಾಲದಲ್ಲಿ ಫಿಲೆಮೋನನಿಗೆ ಕೆಲಸಕ್ಕೆ ಬಾರದವನಾಗಿದ್ದರೂ, ಈಗ ದೇವರ ಕೃಪೆಯಿಂದ ಬದಲಾಗಿರುವ ಕಾರಣ, ಫಿಲೆಮೋನನಿಗೆ, ಪೌಲನಿಗೆ, ಎಲ್ಲದಕ್ಕಿಂತ ಹೆಚ್ಚಾಗಿ ಯೇಸು ಕ್ರಿಸ್ತನಿಗೆ ಉಪಯುಕ್ತನಾಗಿದ್ದಾನೆ. ಯೇಸು ಕ್ರಿಸ್ತನ ಸುವಾರ್ತೆಯನ್ನು ನಂಬುವವರೊಳಗೆ ಒಂದು ಕಾರ್ಯವು ನೆರವೇರುತ್ತದೆ: ಅದು ಕೆಲಸಕ್ಕೆ ಬಾರದವರನ್ನು ಉಪಯುಕ್ತರನ್ನಾಗಿ ಮಾಡುತ್ತದೆ. ಈ ಚಿಕ್ಕ ಪತ್ರಿಕೆಯ ಪ್ರಾಮುಖ್ಯವಾದ ಧ್ಯೇಯವೇನೆಂದರೆ ದೇವಜನರು ತಮ್ಮ ಜೀವಿತದಲ್ಲಿ ಎಷ್ಟೇ ಕುಗ್ಗಿಹೋಗಿದ್ದರು ವಿಶ್ವಾಸಿಗಳು ಅವರಿಗೆ ಪ್ರೀತಿಯನ್ನು ತೋರಿಸಬೇಕು.

# 1 1

**1:1** *“ಸೆರೆಯವನು”*– ಎಫೆ 3:1; 4:1; 2 ತಿಮೊ 1:8.

*“ತಿಮೊಥೆಯನು”*– ಫಿಲಿ 1:1; ಅಪೊ 16:1-3.

*"ಫಿಲೆಮೋನನು"*– ಸತ್ಯವೇದದಲ್ಲಿ ಈ ಒಂದು ಸ್ಥಳದಲ್ಲಿ ಮಾತ್ರವೇ ಇವನ ಹೆಸರು ಬರೆಯಲ್ಪಟ್ಟಿದೆ. **2**

**1:2** *"ಅಪ್ಫಿಯಳು"*– ಈಕೆ ಯಾರು ಎಂದು ನಮಗೆ ಹೇಳಲಾಗಿಲ್ಲ.

*"ಅರ್ಖಿಪ್ಪ"*– ಕೊಲೊ 4:17.

*"ಸಹಭಟ"*– 2 ತಿಮೊ 2:2; 4:7.

*"ಮನೆ"*– ರೋಮಾ 16:15; 1 ಕೊರಿಂಥ 16:19; ಕೊಲೊ 4:15. **3**

- **1:3** ರೋಮಾ 1:7. **4-5**

- **1:4-5** ರೋಮಾ 1:8; 1 ಕೊರಿಂಥ 1:4; ಎಫೆ 1:15-16; ಫಿಲಿಪ್ಪಿ 1:3; ಕೊಲೊ 1:3-4; 1 ಥೆಸ 1:2; 2 ತಿಮೊ 1:3. **6**

**1:6** *"ತಿಳುವಳಿಕೆಯಿಂದ"*– ಯೇಸು ಕ್ರಿಸ್ತನಿಗೆ ನಮಗೇನು ದೊರೆಯುತ್ತದೆ ಎಂದು ತಿಳಿಯುವದು ಮತ್ತು ನಮ್ಮ ನಂಬಿಕೆಯನ್ನು ಪರಿಣಾಮಕಾರಿಯಾಗಿ ಹಂಚಿಕೊಳ್ಳುವದು ನಿಕಟವಾದ ಸಂಬಂಧವನ್ನು ಹೊಂದಿವೆ. ಆತನಲ್ಲಿ ನಮಗೇನಿದೆ ಎಂಬದನ್ನು ನಾವು ಹೆಚ್ಚಾಗಿ ತಿಳಿದುಕೊಂಡಷ್ಟೂ, ಇತರರೊಂದಿಗೆ ಉತ್ತಮವಾಗಿ ಮಾತನಾಡಬಹುದು ಮತ್ತು ಪ್ರೀತಿಯಿಂದ ಅವರೊಂದಿಗೆ ನಡೆದುಕೊಳ್ಳಬಹುದು.

*"ಕ್ರಿಸ್ತನಲ್ಲಿ"*– ರೋಮಾ 6:3-8; ಎಫೆ 1:1,4. **7**

**1:7** *"ದೇವಜನರು"*– ರೋಮಾ 1:7.

*"ಪ್ರೋತ್ಸಾಹ"*– ವ 20; ರೋಮಾ 15:32; 1 ಕೊರಿಂಥ 16:18; 2 ಕೊರಿಂಥ 7:13; 2 ತಿಮೊ 1:16. ಪ್ರೀತಿಯ ಅನ್ಯೋನ್ಯತೆ, ಧಾರಾಳತೆ ಮತ್ತು ದಯೆ ಇಂಥ ಕಾರ್ಯಗಳನ್ನು ಮಾಡುತ್ತವೆ. **8-9**

**1:8-9** ಯೇಸು ಕ್ರಿಸ್ತನ ಸೇವಕನಾಗಿ ಪೌಲನು, ವಿಶ್ವಾಸಿಯಾಗಿದ್ದ ಫಿಲೆಮೋನನಿಗೆ ಅವನ ಕರ್ತವ್ಯಗಳನ್ನು ಹಾಗೂ ಸತ್ಯವೇದದಲ್ಲಿರುವ ಆದೇಶಗಳನ್ನು ತಿಳಿಸಬಹುದಾಗಿತ್ತು. ಆದರೆ ಫಿಲೆಮೋನನು ಈಗಾಗಲೇ ತನ್ನ ಹೃದಯದಲ್ಲಿ ಪ್ರೀತಿಯಿರುವದನ್ನು ತೋರಿಸಿದ್ದನು (ವ 7), ಆದ್ದರಿಂದ ಪೌಲನ ಅದರ ಆಧಾರದ ಮೇರೆಗೆ ಮನವಿ ಮಾಡುತ್ತಾ ಇದ್ದಾನೆ. **9**

**1:9** *"ಮುದುಕನು"*– ಆ ಸಮಯದಲ್ಲಿ ಪೌಲನು ಬಹುಶಃ 60 ವರ್ಷ

ಪ್ರಾಯದವನಾಗಿದ್ದನು. ಅಪೊ 7:58 ರೊಂದಿಗೆ ಹೋಲಿಸಿ ನೋಡಿರಿ. 10

**1:10** *"ಮಗ"*– ಅವನ ಮಾತಿನ ಅರ್ಥ ನಿಜವಾದ ಮಗನಲ್ಲ, ಆತ್ಮೀಕ ಮಗ. 1 ತಿಮೊ 1:12 ರೊಂದಿಗೆ ಹೋಲಿಸಿ ನೋಡಿರಿ. ಪೌಲನ ಬೋಧನೆಯ ಮೂಲಕ ಓನೇಸಿಮನು ಯೇಸು ಕ್ರಿಸ್ತನಲ್ಲಿ ಪುನರುಜ್ಜೀವನವನ್ನು ಪಡೆದನು (ಯೋಹಾನ 1:12-13). ಪೌಲನು ಸೆರೆಮನೆಯಲ್ಲಿದ್ದರೂ ಯೇಸು ಕ್ರಿಸ್ತನ ವಿಷಯವಾಗಿ ಸಾಕ್ಷಿ ಕೊಡದೆ ಇರಲಿಲ್ಲ. 11

**1:11** ಓನೇಸಿಮನು ಎಂದರೆ "ಪ್ರಯೋಜಕನು". ಅವನು ಫಿಲೆಮೋನನಿಗೆ ದಾಸನಾಗಿದ್ದನು (ವ 16), ಅಲ್ಲದೆ ಅವನು ತನ್ನ ಯಜಮಾನನ ಬಳಿಯಿಂದ ಓಡಿಹೋಗಿ ಅವನಿಗೆ ಅಪ್ರಯೋಜಕನಾಗಿದ್ದನು. ಆದರೆ ದೇವರ ಮಗನಾದ ನಂತರ ಅವನು ಉನ್ನತವಾದ ರೀತಿಯಲ್ಲಿ ಪ್ರಯೋಜಕನಾದನು. 12

**1:12** *"ನನಗೆ ಪ್ರಾಣದಂತಿದ್ದಾನೆ"*– ಮಾನವರು ಸಹಜವಾಗಿ ಸಮಾಜದಲ್ಲಿ ಅತ್ಯಂತ ಕೀಳಾಗಿ ಕಾಣುತ್ತಿದ್ದವರ ಮೇಲೆ ಪ್ರಸಿದ್ಧನಾದ ಅಪೊಸ್ತಲನು ಇಂಥ ಪ್ರೀತಿಯುಳ್ಳವನಾಗಿದ್ದನು. ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವನ ಹೃದಯದಲ್ಲಿ ಆತನ ಪ್ರೀತಿ ಇಂಥ ಕಾರ್ಯವನ್ನು ಮಾಡುತ್ತದೆ. 13-14

**1:13-14** ಫಿಲೆಮೋನನು ಒಂದುವೇಳೆ ಪೌಲನು ಇದ್ದ ಸ್ಥಳದಲ್ಲಿ ಇದ್ದಿದ್ದರೆ ಖಂಡಿತವಾಗಿಯೂ ಅವನಿಗೆ ಸಹಾಯವಾಗಿ ಇರುತ್ತಿದ್ದನು ಎಂಬ ದೃಢತೆ ಪೌಲನಿಗಿತ್ತು. ಆದರೆ ಅವನು ಮತ್ತೊಬ್ಬನ ದಾಸನನ್ನು ಅವನ ಅನುಮತಿಯಿಲ್ಲದೆ ಉಪಯೋಗಿಸಿಕೊಳ್ಳದವನಾಗಿದ್ದನು. ಒಂದುವೇಳೆ ದಯೆಯನ್ನು ಒತ್ತಾಯಪಡಿಸಿದರೆ ಮತ್ತು ಉಚಿತವಾಗಿರದೆ ಇದ್ದರೆ, ಅದು ದಯೆಯೇ ಅಲ್ಲ. ನಾವು ದೇವರಿಗೆ ಅಥವಾ ಆತನ ಜನರಿಗೆ ಯಾವುದೇ ವರವನ್ನು ಮಾಡಿದರೆ ಇದು ಸತ್ಯವಾಗಿದೆ – 2 ಕೊರಿಂಥ 9:7. 16

**1:16** *"ದಾಸ"*– ಎಫೆ 6:5; ವಿಮೋ 21:2 ರ ನೋಟ್ಸ್ ನೋಡಿರಿ.

*"ಪ್ರಿಯ ಸಹೋದರನು"*– ಕೊಲೊ 4:9. ಯೇಸು ಕ್ರಿಸ್ತನಲ್ಲಿ ಯಜಮಾನರು ಮತ್ತು ದಾಸರು, ಐಶ್ವರ್ಯವಂತರು ಮತ್ತು ಬಡವರು, ವಿದ್ಯಾವಂತರು ಮತ್ತು ಅವಿದ್ಯಾವಂತರು, ಮಾನವರು ಮೇಲ್ಜಾತಿ ಅಥವಾ ಕೀಳ್ಜಾತಿ ಅಥವಾ ತಳ್ಳಲ್ಪಟ್ಟವರು ಎಂಬದಾಗಿ ಪರಿಗಣಿಸುವವರೆಲ್ಲರೂ, ಸಹೋದರರು ಮತ್ತು ಒಂದೇ ಜನರು ಹಾಗೂ ಒಂದೇ ದೇಹವಾಗಿದ್ದಾರೆ – ಕೊಲೊ 3:11; ಗಲಾ 3:28; 1 ಕೊರಿಂಥ 12:12-13. ಇದನ್ನು

ಅಂಗೀಕರಿಸಿಕೊಳ್ಳದಿರುವ ಯಾವುನೇ ಕ್ರೈಸ್ತನಾದರೂ ದೇವರು ತಾನೇ ಪ್ರಕಟಿಸಿರುವ ಅತ್ಯಂತ ಪ್ರಾಮುಖ್ಯವಾದ ಸತ್ಯವನ್ನು ನಿರಾಕರಿಸುವವನಾಗಿದ್ದಾನೆ. ಕೀಳಾದವರು ಎಂದು ಆಲೋಚನೆ ಮಾಡುವವರ ಮೇಲೆ ನಮ್ಮನ್ನು ಹೆಚ್ಚಿಸಿಕೊಳ್ಳುವದು ದೇವರಿಗೆ ಅತ್ಯಂತ ವಿರುದ್ಧವಾದ ಕಾರ್ಯವಾಗಿದೆ. **17-19**

**1:17-19** ಪೌಲನು ಇದನ್ನು ಯೇಸು ಕ್ರಿಸ್ತನಿಂದ ಕಲಿತುಕೊಂಡಿದ್ದನು. ದೇವರು ತನ್ನ ಸ್ವಂತ ಮಗನನ್ನು ಅಂಗೀಕರಿಸಿಕೊಳ್ಳುವ ಹಾಗೆಯೇ ವಿಶ್ವಾಸಿಗಳನ್ನು ಅಂಗೀಕರಿಸಿಕೊಳ್ಳುತ್ತಾನೆ ಎಂಬದು ಅವನಿಗೆ ಗೊತ್ತಿದೆ – ಅಪೊ 15:8; ರೋಮಾ 5:2; 14:3; ಎಫೆ 2:18. ಯೇಸು ಕ್ರಿಸ್ತನು ನಮ್ಮನ್ನು ಅಂಗೀಕರಿಸಿಕೊಳ್ಳುವಂತೆಯೂ ನಾವೂ ಒಬ್ಬರನ್ನೊಬ್ಬರು ಅಂಗೀಕರಿಸಿಕೊಳ್ಳಬೇಕು ಎಂಬದು ಆತನಿಗೆ ಗೊತ್ತಿತ್ತು – ರೋಮಾ 15:7. ಯಾರಾದರೂ ಒಬ್ಬ ವ್ಯಕ್ತಿಯನ್ನು ಕಳುಹಿಸುವದಾದರೆ ಅವನನ್ನು ಅಂಗೀಕರಿಸಿಕೊಳ್ಳುವದು, ಕಳುಹಿಸಿದವನನ್ನೇ ಅಂಗೀಕರಿಸಿಕೊಳ್ಳುವದಾಗಿದೆ ಎಂಬದು ಅವನಿಗೆ ಗೊತ್ತಿತ್ತು – ಯೋಹಾನ 13:20. ವಿಶ್ವಾಸಿಗಳ ಎಲ್ಲಾ ತಪ್ಪುಗಳು, ಪಾಪಗಳು ಮತ್ತು ಆತ್ಮೀಕ ಸಾಲಗಳನ್ನು ಯೇಸು ಕ್ರಿಸ್ತನ ಲೆಕ್ಕಕ್ಕೆ ಹಾಕಲಾಗಿದೆ ಮತ್ತು ಯೇಸು ಕ್ರಿಸ್ತನು ಅವೆಲ್ಲವನ್ನು ತೀರಿಸಿದ್ದಾನೆ ಎಂಬದನ್ನೂ ಅವನು ಬಲ್ಲವನಾಗಿದ್ದನು – ಯೆಶಾಯ 53:5-6; ರೋಮಾ 8:33-34; 2 ಕೊರಿಂಥ 5:19-21. ಪೌಲನು ಪ್ರೀತಿ ಎಂದರೆ ಏನು ಮತ್ತು ದೈವೀಕವಾದ ಈ ತತ್ವಗಳ ಅರ್ಥವೇನು ಎಂಬದನ್ನು ತಿಳಿದುಕೊಂಡಿದ್ದನು ಹಾಗೂ ಅವುಗಳನ್ನು ಅಭ್ಯಾಸ ಮಾಡಲು ಸಂತೋಷವುಳ್ಳವನಾಗಿದ್ದನು. ನಾವೂ ಹೀಗೆಯೇ ಮಾಡಬೇಕು. ಯೇಸು ಕ್ರಿಸ್ತನು ನಮ್ಮ ಸಾಲಗಳನ್ನೆಲ್ಲಾ ತೀರಿಸಿರುವ ಹಾಗೆ ನಾವೂ ಇತರೆ ವಿಶ್ವಾಸಿಗಳ ಸಾಲಗಳನ್ನು ತೀರಿಸುವವರಾಗಿರಬೇಕು ಮತ್ತು ದೇವರನ್ನು ನೋಯಿಸಿರುವ ನಮ್ಮನ್ನು ಆತನು ಅಂಗೀಕರಿಸಿಕೊಂಡಿರುವ ಹಾಗೆ ನಾವು ನಮ್ಮನ್ನು ನೋಯಿಸುವ ಇತರೆ ವಿಶ್ವಾಸಿಗಳನ್ನು ಅಂಗೀಕರಿಸಿಕೊಳ್ಳಬೇಕು. **19**

**1:19** *"ನಿನ್ನ ಆತ್ಮದ ವಿಷಯದಲ್ಲಿ"*– ಫಿಲೆಮೋನನು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡಿದ್ದನು ಮತ್ತು ಪೌಲನ ಸೇವೆಯ ಮೂಲಕ ಅವನು ರಕ್ಷಣೆ ಮಾರ್ಗಕ್ಕೆ ಬಂದಿದ್ದನು ಎಂಬದು ಪೌಲನ ಮಾತಿನ ಅರ್ಥವಾಗಿದೆ. ಫಿಲೆಮೋನನು ಮಹತ್ತಾದ ಈ ಕಾರ್ಯವನ್ನು ಪೌಲನಿಂದ ಹೊಂದಿದ್ದನು. ಆದ್ದರಿಂದ ಅವನು ಪೌಲನು ಪ್ರೀತಿಸುತ್ತಿದ್ದ ಕ್ರಿಸ್ತನಲ್ಲಿರುವ ಮತ್ತೊಬ್ಬ ಸಹೋದರನ ತಪ್ಪುಗಳನ್ನು ಕ್ಷಮಿಸಬೇಕು. **20**

**1:20** ಈ ಪ್ರಯೋಜನವು ಅವನಿಗೆ ಮಾತ್ರವಲ್ಲ ಬದಲಾಗಿ ಅವನಿಗೆ ಪ್ರಿಯನಾಗಿದ್ದವನಿಗೂ

ಆಗಿದೆ.

*"ಸಂತೋಷ"*– ವ 7. 21

**1:21** *"ವಿಧೇಯತೆ"*– ಆಜ್ಞೆಗೆ ವಿಧೇಯರಾಗುವದಲ್ಲ, ಯಾಕಂದರೆ ಪೌಲನು ಯಾವ ಆಜ್ಞೆಯನ್ನು ಕೊಟ್ಟಿಲ್ಲ (ವ 8,9), ಬದಲಾಗಿ ಪ್ರೀತಿಯ ಕುರಿತಾದ ಉನ್ನತವಾದ ತತ್ವಗಳಿಗೆ ವಿಧೇಯರಾಗಬೇಕು. ಇದು ಎಲ್ಲಾ ರೀತಿಯ ವಿಧೇಯತೆಗಳಲ್ಲಿ ಉತ್ತಮವಾಗಿದೆ. ನಾವು ಯೇಸು ಕ್ರಿಸ್ತನನ್ನು ಪ್ರೀತಿಸುವದರಿಂದ ಆತನನ್ನು ಮೆಚ್ಚಿಸಲು ಕಾರ್ಯಗಳನ್ನು ಮಾಡಬೇಕು ಮತ್ತು ಇದರ ಆಧಾರದ ಮೇರೆಗೆ ಇತರರಿಗೆ ಸಹಾಯ ಮಾಡಬೇಕು. 22

**1:22** ಫಿಲೆಮೋನನು (ಮತ್ತು ಇತರರ) ಪ್ರಾರ್ಥನೆಯ ಮೂಲಕ ಪೌಲನು ಸೆರೆಮನೆಯಿಂದ ಬಿಡುಗಡೆಯಾಗುವದನ್ನು ನಿರೀಕ್ಷಿಸಿದನು. ಅಪೊ 12:5-11 ರೊಂದಿಗೆ ಹೋಲಿಸಿ ನೋಡಿರಿ. 23

**1:23** *"ಎಫಪ್ರನು"*– ಕೊಲೊ 1:7; 4:12.

*"ಮಾರ್ಕನು"*– ಮಾರ್ಕ – 2 ತಿಮೊ 4:11.

*"ಅರಿಸ್ತಾರ್ಕನು"*– ಕೊಲೊ 4:10.

*"ದೇಮನು, ಲೂಕನು"*– ಕೊಲೊ 4:14. 25

- **1:25** ರೋಮಾ 1:7; 16:20.